


ಮೇಷ್ಟ್ರು ಮಕ್ಕಳಿಗೆ ಸತಿ ಸಾವಿತ್ರಿ ಕಥೆ ಹೇಳುತ್ತಿದ್ದರು.

**ಮೇಷ್ಟ್ರು:** ಮಕ್ಕಳೇ, ಸಾವಿತ್ರಿ ತನ್ನ ಪತಿಗಾಗಿ ಸಾವಿನ ದೇವರು ಯಮನ ಬಳಿ ಬಂದು, ಹೋರಾಡಿ, ಪತಿಯನ್ನು ಉಳಿಸಿಕೊಂಡಳು. ಈ ಕಥೆಯ ನೀತಿ ಪಾಠವೇನು?

**ಗುಂಡ:** ಹೆಂಡತಿಯಿಂದ ಬಚಾವ್ ಮಾಡಲು ಯಾವ ಯಮನಿಂದಲೂ ಸಾಧ್ಯವಿಲ್ಲ ಸರ್!

***

**ಟೀಚರ್:** ಸಂಸ್ಕೃತದಲ್ಲಿ ಹೆಂಡತಿಗೆ ಏನಂತಾರೆ?

**ಗುಂಡ:** ಸರ್, ಸಂಸ್ಕೃತ ಮಾತ್ರ ಅಲ್ಲ ಪ್ರಪಂಚದ ಯಾವುದೇ ಭಾಷೆಯಲ್ಲೂ ಹೆಂಡತಿಗೆ ಏನೂ ಅನ್ನಂಗಿಲ್ಲ.

***

ಕನ್ಯೆಯನ್ನು ನೋಡಲು ಹೋಗಿದ್ದಳು.

**ಆಕೆ:** ಎಲ್ಲಿಯವರೆಗೂ ಓದಿದ್ದೀಯಮ್ಮ?

**ಕನ್ಯೆ:** ನಿದ್ದೆ ಬರುವವರೆಗೂ ಓದಿದ್ದೇನೆ.

***

**ಟೀಚರ್:** ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಅಂದರೂ ಅವರು ಯಾಕೆ ತೊಲಗಲಿಲ್ಲ.

**ಗುಂಡ:** ಯಾಕೆಂದರೆ ಅವರಿಗೆ ಕನ್ನಡಾನೇ ಬರ್ತಾ ಇರ್ಲಿಲ್ಲವಲ್ಲ.

***

**ಡಾಕ್ಟರ್:** ನಿಮ್ಮ ಹೆಂಡತಿಯ ಮೂರು ಹಲ್ಲುಗಳನ್ನು ತೆಗೆಯಬೇಕಾಗುತ್ತದೆ. ಅದರ ಫೀಸ್ ಒಂದು ಸಾವಿರ ರೂಪಾಯಿ.

**ಗಂಡ:** ನಾಲಗೆಗೆ?

***

**ಗಂಡ:** ನಾನು ತಪ್ಪಿಸಿಕೊಂಡರೆ ನೀನೇನು ಮಾಡ್ತೀಯ?

**ಹೆಂಡತಿ:** ಪೇಪರ್‌ನಲ್ಲಿ ಜಾಹೀರಾತು ಕೊಡ್ತೀನಿ.

**ಗಂಡ:** ವಾಹ್, ಏನಂತ?

**ಹೆಂಡತಿ:** ಗಂಡ ಬೇಕಾಗಿದ್ದಾನೆ ಅಂತ.

**ವೆಂಕ:** ಸೂರ್ಯನಿಗೂ, ಹೆಂಡತಿಗೂ ಇರುವ ಸಾಮ್ಯತೆ ಏನು?

**ಸೀನ:** ಇಬ್ಬರನ್ನೂ ನೇರವಾಗಿ ನೋಡೋಕ್ಕಾಗೋಲ್ಲ.

**ವೆಂಕ:** ಯಾಕೆ, ಕಾಲು ಎಳಕೊಂಡು ನಡೀತಿದ್ದೀಯ?

**ಸೀನ:** ವಿಪರೀತ ಕಾಲು ನೋವು.

**ವೆಂಕ:** ಒಬ್ನೇ ಬರೋಕೆ ಬದಲು ಹೆಂಡತಿ ಜೊತೆ ಬಂದಿದ್ದರೆ ಅನುಕೂಲವಿತ್ತೇನೋ?

**ಸೀನ:** ಅಯ್ಯೋ, ಕಾಲುನೋವು ಸಾಲದಾ? ಜೊತೆಗೆ ತಲೆನೋವು ಬೇರೆ ಯಾಕೆ ಬೇಕೂಂತ?

**ಅಂಕಲ್:** ಸಿನಿಮಾ ಥಿಯೇಟರ್‌ಗೂ ಆಪರೇಷನ್ ಥಿಯೇಟರ್‌ಗೂ ಇರುವ ವ್ಯತ್ಯಾಸ ಏನು?

**ಗುಂಡ:** ಟಿಕೇಟ್ ತೊಗೊಂಡು ಒಳಗೆ ಹೋಗೋದು ಸಿನಿಮಾ ಥಿಯೇಟರ್, ಒಳಗೆ ಹೋಗಿ ಟಿಕೇಟ್ ತೊಗೊಳ್ಳೋದು ಆಪರೇಷನ್ ಥಿಯೇಟರ್!

**ಬ್ಯಾಂಕ್ ಮ್ಯಾನೇಜರ್:** ನಿಮಗೆ ಯಾವ ಸಾಲ ಬೇಕು?

**ವೆಂಕ:** ಮನೆ ಕಟ್ಟೋಕೆ.

**ಬ್ಯಾಂಕ್ ಮ್ಯಾನೇಜರ್:** ಹೇಗೆ ಕಟ್ತೀರ?

**ವೆಂಕಿ:** ಇಟ್ಟಿಗೆಯಿಂದಾನೇ

**ಅಂಕಲ್:** ಯಾಕೋ ಗುಂಡ ಒಂಬತ್ತು ಗಂಟೆಗೆ ಶುರುವಾಗೋ ಶಾಲೆಗೆ ಏಳು ಗಂಟೆಗೇ ಬರ್ತೀಯಾ?

**ಗುಂಡ:** ಮನೆಯವರ ಕಾಟ ತಡೆಯೋಕ್ಕಾಗೋಲ್ಲ ಅಂಕಲ್!

**ಅಂಕಲ್:** ಮತ್ತೆ, ಶಾಲೆ ಬಿಟ್ಟ ತಕ್ಷಣ ಓಡಿ ಬರ್ತೀಯ?

**ಗುಂಡ:** ಟೀಚರ್‌ಗಳ ಕಾಟ ತಡೆಯೋಕ್ಕಾಗೋಲ್ಲ.

**ಸೀನ:** ಏನು ಹಚ್ಚಿದರೂ ಕೂದಲ ನರೆ ಕಡಿಮೆಯಾಗುತ್ತಿಲ್ಲ. ಅದು ಕಾಣಿಸದೇ ಇರೋಕೆ ಏನು ಮಾಡಲಿ?

**ವೆಂಕ:** ಟೋಪಿ ಹಾಕ್ಕೊಂಡು ನೋಡು.

ಸಂಗ್ರಹ: ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು




***

**ರೋಗಿ:** ಡಾಕ್ಟರ್, ಬಹಳ ದಿನ ಬದುಕುವುದಕ್ಕೆ ಔಷಧಿ ಇದೆಯಾ?

**ಡಾಕ್ಟರ್:** ಮದುವೆ ಆಗು.

**ರೋಗಿ:** ಆಗ ಬಹಳ ದಿನ ಬದುಕಬಹುದಾ?

**ಡಾಕ್ಟರ್:** ಹಾಗೇನಿಲ್ಲ, ಮದುವೆಯಾದರೆ ಅಸಲಿಗೆ ಅಂತ ಯೋಚನೇನೆ ಬರೋದಿಲ್ಲ.

***

**ಸಂದರ್ಶಕ:** ನಿನ್ನ ಹುಟ್ಟಿದ ದಿನ ಯಾವಾಗ?

**ಗುಂಡ:** 13, ಅಕ್ಟೋಬರ್ ಸರ್!




**ಸಂದರ್ಶಕ:** ಯಾವ ವರ್ಷ?

**ಗುಂಡ:** ಪ್ರತಿ ವರ್ಷ ಸರ್!

***

ಅಮೆರಿಕದ ವ್ಯಕ್ತಿ ಗುಂಡನನ್ನು ಕೇಳಿದ...

**ಗುಂಡ:** ಯಾರಾದರೂ ದೊಡ್ಡ ಮನುಷ್ಯ ನಿಮ್ಮ ಹಳ್ಳಿಯಲ್ಲಿ ಹುಟ್ಟಿದ್ದಾರಾ?

**ಗುಂಡ:** ಇಲ್ಲ ಸರ್! ಇಲ್ಲಿ ಹುಟ್ಟಿದವರೆಲ್ಲಾ ಸಣ್ಣ ಮಕ್ಕಳೇ!

ಸಂಗ್ರಹ:
ಕೆ. ಮನೋಜ್ ಕುಮಾರ್, ಬೆಂಗಳೂರು